434

(72)

ಕಂ.ಪಹಣಿ/ಹ.ಬ.ವಿವಾದ/69/16–17
ತಹಶೀಲ್ದಾರರ ನ್ಯಾಯಾಲಯ, ಸಂಡೂರು ದಿನಾಂಕ : 24–10–2016.

ಉಪಸ್ಥಿತರು : ಶ್ರೀ ನಾಗರಾಜ, ತಹಶೀಲ್ದಾರರು, ಸಂಡೂರು
ವಾದಿ : 1) ಶ್ರೀ ಯುವರಾಜಗೌಡ ತಂದೆ ಪೊಂಪಾಪತಿ, ದರೋಜಿ ಗ್ರಾಮ, ಸಂಡೂರು ತಾಲೂಕು.
2) ಶ್ರೀಮತಿ ಲೋಕೇಶ್ವರಿ ಗಂಡ ವಿಶ್ವನಾಥ, ಹಳೇದರೋಜಿ ಗ್ರಾಮ, ಸಂಡೂರು ತಾಲೂಕು.
ಪ್ರತಿವಾದಿ : ಕಂದಾಯ ನಿರೀಕ್ಷಕರು, ತೋರಣಗಲ್ಲು.

| ಗ್ರಾಮ | ಸರ್ವೆ ನಂಬರ್ | ವಿಸ್ತೀರ್ಣ |
|---|---|---|
| ದರೋಜಿ | 173/ಇ | 1 ಎಕರೆ 83 ಸೇಂಟ್ಸ್ |

***ಪೀಠಿಕೆ :*** ಸಂಡೂರು ತಾಲೂಕು, ದರೋಜಿ ಗ್ರಾಮದ ಸ.ನಂ. 173/ಇ ವಿಸ್ತೀರ್ಣ 1 ಎಕರೆ 83 ಸೇಂಟ್ಸ್ ಜಮೀನು ಬಗ್ಗೆ ವಾದಿಗಳು ಕೂಡ್ಲಿಗಿ ಸೀನಿಯರ್ ಸಿವಿಲ್ ನ್ಯಾಯಾಲಯ ಓ.ಎಸ್. ನಂ. 06/2016 (ಲೋಕ ಅದಾಲತ್) ಎಫ್.ಡಿ.ಪಿ ಆದೇಶ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ. ಈ ಪ್ರಕಾರ ಕಂದಾಯ ನಿರೀಕ್ಷಕರು ತೋರಣಗಲ್ಲು ಇವರು ಹಕ್ಕು ಬದಲಾವಣೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ನಮೂನೆ–21 ನೋಟಿಸ್ ಜಾರಿ ಮಾಡಲಾಗಿ ಸಂಡೂರು ಸಿವಿಲ್ ನ್ಯಾಯಾಲಯ, ಸಂಡೂರು ಓ.ಎಸ್ ನಂ. 86/16 ರಲ್ಲಿ ತಡೆ ಆಜ್ಞೆ ನೀಡಿರುವುದರಿಂದ ಪ್ರಕರಣವನ್ನು ಎಂ.ಎನ್.ನಂ. 1/16–17 ರಂತೆ ಕಂದಾಯ ನಿರೀಕ್ಷಕರು ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಸಲ್ಲಿಸಿರುವ ದಾಖಲೆ ಪರಿಶೀಲಿಸಲಾಗಿ ಪ್ರಸ್ತಾಪಿತ ಸ.ನಂ. ಜಮೀನು ಬಗ್ಗೆ ಸೀನಿಯರ್ ಸಿವಿಲ್ ನ್ಯಾಯಾಲಯ ಕೂಡ್ಲಿಗಿ ಇವರು ವಿಚಾರಣೆ ನಡೆಸಿ ಓ.ಎಸ್.ನಂ. 6/2016 ರಂತೆ (ಲೋಕ ಅದಾಲತ್) (ಎಫ್.ಡಿ.ಪಿ) ಫೈನಲ್ ಆದೇಶ ಮಾಡಿರುತ್ತಾರೆ. ಸದರಿ ಆದೇಶಕ್ಕೆ ನೀಡಿರುವ ತಡೆ ಆಜ್ಞೆ ಯಾವುದೇ ದಾಖಲೆ ಇರುವುದಿಲ್ಲವಾದ್ದರಿಂದ ಎಫ್.ಡಿ.ಪಿ ಆದೇಶ ಪ್ರಕಾರ ಹಕ್ಕು ಬದಲಾವಣೆ ಮಾಡಲು ಈ ಕೆಳಗಿನಂತೆ ಆದೇಶ.

## : : ಆದೇಶ : :

ಪೀಠಿಕೆಯಲ್ಲಿ ವಿವರಿಸಿದಂತೆ ಸಂಡೂರು ತಾಲೂಕು ದರೋಜಿ ಗ್ರಾಮ ಸ.ನಂ. 173/ಇ ವಿಸ್ತೀರ್ಣ 1–83 ಎಕರೆ ಜಮೀನು ಬಗ್ಗೆ ಕೂಡ್ಲಿಗಿ ಸೀನಿಯರ್ ಸಿವಿಲ್ ನ್ಯಾಯಾಲಯ (ಲೋಕ ಅದಾಲತ್) ಎಫ್.ಡಿ.ಪಿ ಆದೇಶ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ : 24–10–016 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಘೋಷಿಸಲಾಯಿತು.

ತಹಶೀಲ್ದಾರರು,
ಸಂಡೂರು

ತಹಶೀಲ್ದಾರರು, ಸಂಡೂರು
TAHASILDAR, SANDUR

ಗೆ,

1) ಭೂಮಿ ಕೇಂದ್ರ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2) ಕಂದಾಯ ನಿರೀಕ್ಷಕರು, ತೋರಣಗಲ್ಲು ಇವರಿಗೆ ಕ್ರಮಕ್ಕಾಗಿ

ಪ್ರತಿ : ವಾದಿಗಳಿಗೆ ಮಾಹಿತಿಗಾಗಿ ಕಳಹಿಸಲಾಗಿದೆ.